ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್ :—ರೂಲ್ ನಂ. 180 (2)ರಲ್ಲಿ ಸ್ಪಷ್ಟವಾಗಿ ಹೇಳಿದೆ. ".....if not less than ten members rise accordingly, the Speaker shall intimate that leave is granted" The rule says "shall". My submission is that Madam. Speaker stated that since Sri K. H. Patil has given an explanatory statement, this is not allowed. ಆದರೆ ರೂಲ್‌ನಲ್ಲಿ ಎಕ್ಸ್‌ಪ್ಲನೇಷನ್ ಕೊಟ್ಟರೆ ಪ್ರಿವಿಲೇಜ್ ಮೋಷನ್ ಮೂವ್ ಮಾಡುವುದಕ್ಕೆ ಅವ ಕಾಶ ಇಲ್ಲ ಎಂದು ಎಲ್ಲೂ ಕೂಡ ಇಲ್ಲ. I therefore request madam speaker to give permission.

ಅಧ್ಯಕ್ಷರು :—ಈಗ ರೂಲಿಂಗ್ ಬೇಕು ತಾನೇ ; ರೂಲಿಂಗ್‌ನ್ನು ಹೀಗೆಯೇ ಕೊಡಬೇಕೆಂದು ಎಲ್ಲೂ ಕೂಡ ಇಲ್ಲ. ನಾನು ಏನು ಹೇಳುತ್ತೇನೆ ಅದು ರೂಲಿಂಗ್ ಆಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :—ತಮ್ಮ ಕಾಗದ ತಲುಪಿದೆ. ಮಾನ್ಯ ಕೆ. ಹೆಚ್. ಪಾಟೀಲರು ಸ್ವತಃ ಇದ್ದು ಎಲ್ಲ ವಿಚಾರದಲ್ಲೂ ಕೂಡ ಈ ಸದನದಲ್ಲಿ ವಿವರಣೆ ಕೊಟ್ಟಿರುವುದರಿಂದ ಈ ಪ್ರಿವಿಲೇಜ್ ಮೋಷನ್ ಸ್ಟ್ಯಾಂಡ್ ಆಗುವುದಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ರೂಲ್ 177ರ ಪ್ರಕಾರ ಒಬ್ಬ ವ್ಯಕ್ತಿ ಪ್ರಿವಿಲೇಜ್ ಮೋಷನ್ ಮೂವ್ ಮಾಡಿದಾಗ ಎಕ್ಸ್‌ಪ್ಲನೇಷನ್ ಕೊಟ್ಟರೆ ಪ್ರಿವಿ ಲೇಜ್ ಮೋಷನ್ ರೈಸ್ ಮಾಡುವುದಕ್ಕೆ ಬರುವುದಿಲ್ಲ ಎಂದು ಎಲ್ಲೂ ಕೂಡ ಹೇಳಿಲ್ಲ. 10 ಜನರು ಎದ್ದುನಿಂತು ಪರ್ಮಿಷನ್ ಕೇಳಿದರೆ ತಾವು ಪರ್ಮಿಷನ್ ಕೊಡಲೇಬೇಕು ಎಂದು ಇದೆ.

ಅಧ್ಯಕ್ಷರು :— ಪ್ರಿವಿಲೇಜ್ ಮೋಷನ್‌ಗೆ ಅನುಮತಿ ಕೊಟ್ಟಮೇಲೆ ಆ ರೂಲ್ ಬರುತ್ತದೆ. ರೂಲಿಂಗ್ ಹೀಗೆಯೇ ಕೊಡಬೇಕೆಂದು ಇಲ್ಲ ; ನಾನು ಏನು ಹೇಳುತ್ತೇನೆ ಅದು ರೂಲಿಂಗ್ ಆಗುತ್ತದೆ. ಈಗ ಅದು ಬರುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :—ಕಳೆದ ವಾರ ನಾನೂ, ಮಾನ್ಯ ಶಾಮಣ್ಣ ನವರೂ ಹಾಗೂ ಇನ್ನೂ ಇತರರೂ ಸೇರಿ ಒಂದು ನೋಟೀಸನ್ನು ಕಳುಹಿಸಿದ್ದೆವು. ಇವತ್ತಿನ ದಿವಸ ರಾಜ್ಯದಲ್ಲಿ 2 ಲಕ್ಷ ಜನ ವಿದ್ಯಾರ್ಥಿಗಳು....

ಅಧ್ಯಕ್ಷರು :—ಮಿನಿಸ್ಟರ್‌ರವರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ತಯಾರಾಗಿದ್ದಾರೆ.

STATEMENT BY THE MINISTER FOR EDUCATION

Re : Strike of the teaching staff of the university.

‡ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ (ವಿದ್ಯಾಶಾಖೆಯ ಮಂತ್ರಿಗಳು):— ಮಾನ್ಯ ಅಧ್ಯಕ್ಷರೇ, ಈಗತಾನೇ ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪ ನವರು ಮತ್ತು ಇತರ ಸನ್ಮಾನ್ಯ ಸದಸ್ಯರು ಯಾವ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಉತ್ತರವಾಗಿ ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ ಈ ಉಪಾಧ್ಯಾಯರ ಬೇಡಿಕೆಗಳು ನನಿವೆ, ಅವುಗಳು ಬಹಳ ಕಾಲದಿಂದ ಈ ಸರ್ಕಾರದ ಮುಂದಿವೆ. ಮತ್ತು ಇತ್ತೀಚೆಗೆ ಉಪಾಧ್ಯಾಯರಿಗೆ ಸಂಬಂಧಪಟ್ಟ ಫೆಡರೇಷನ್‌ನವರು ನಮಗೆ ಅಂದರೆ ಸರ್ಕಾರಕ್ಕೆ ಒಂದು ಮನವಿ ಯನ್ನೂ ಕೂಡ ಕೊಟ್ಟಿದ್ದಾರೆ. ಇದೇ ಸದನದ ಮೊಗಸಾಲೆಯಲ್ಲಿ ಫೆಬ್ರವರಿ 24 ರಂದು ಮತ್ತೆ ಒಂದು ಮನವಿಯನ್ನು ಅವರು ಕೊಟ್ಟು ಅದರಲ್ಲಿ ತಮ್ಮ ಬೇಡಿಕೆ ಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಈ ಸದನದಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಸಾಮಾನ್ಯವಾಗಿ ಈ ಬೇಡಿಕೆಗಳಿಗೆ ಒಂದಲ್ಲೊಂದು ರೂಪದಲ್ಲಿ ಎಂದಾ ಗಲೂ ಕೂಡ ಅದಕ್ಕೆ ಉತ್ತರಗಳನ್ನು ನಾನು ಕೊಟ್ಟಿದ್ದೇನೆ. ಬೆಂಗಳೂರು ವಿಶ್ವ ವಿದ್ಯಾನಿಲಯದ ಮಾನ್ಯ ಉಪಕುಲಪತಿಗಳೂ ಕೂಡ ಈ ಒಂದು ಸೂಚನೆಯನ್ನು ಸರ್ಕಾರದ ಮುಂದಿಟ್ಟಾಗ ಅದರ ಪ್ರಕಾರ 12, 14 ಮತ್ತು 15 ನೇ ತಾರೀಖಿನ ದಿವಸ ಮತ್ತು ಇತ್ತೀಚೆಗೆ ಮಾನ್ಯ ಮುಖ್ಯ ಮಂತ್ರಿಗಳವರ ಕೊಠಡಿಯಲ್ಲಿ ಕೂಡ ನಾವು ಈ ಬೇಡಿಕೆಗಳ ವಿಚಾರದಲ್ಲಿ ಚರ್ಚೆ ಮಾಡಿದ್ದೇವೆ. ಈ ಸಭೆಗಳಲ್ಲಿ ಹಣ ಕಾಸಿನ ಇಲಾಖೆಗೆ ಸಂಬಂಧಪಟ್ಟಂತಹ ಅಧಿಕಾರಿಗಳೂ ಮತ್ತು ನಮ್ಮ ವಿದ್ಯಾ ಇಲಾಖೆಗೆ ಸಂಬಂಧಪಟ್ಟಂಥ ಅಧಿಕಾರಿಗಳೂ ಮುಖ್ಯ ಕಾರ್ಯದರ್ಶಿಯವರೂ, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳೂ ಕೂಡ ಇದ್ದರು. ಮಾನ್ಯ ಮುಖ್ಯ ಮಂತ್ರಿಗಳ ಕೊಠಡಿಯಲ್ಲಿ ಈ ಒಂದು ಸಭೆ ಸಮಾವೇಶಗೊಂಡಾಗ ಮುಖ್ಯ ಮಂತ್ರಿಗಳು ಉಪಾಧ್ಯಾಯರುಗಳ ಪ್ರತಿನಿಧಿಗಳಿಗೆ ಈ ವಿಚಾರದಲ್ಲಿ ಈಗಾಗಲೇ ಸ್ಪಷ್ಟೀಕರಣವನ್ನು ನೀಡಿದ್ದಾರೆ. ಇದೇ ತಿಂಗಳು ಮಾರ್ಚ್ 17 ನೇ ತಾರೀಖು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಕ್ಟಿಕಲ್ ಎಗ್ಸಾಮಿನೇಷನ್ಸ್ ಆಗಬೇಕಾಗಿತ್ತು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಈ ಒಂದು ಕಾಲೇಜು ಟೀಚರ್ ಫೆಡರೇಷನ್ ಏನಿದೆ ಅವರು ಒಂದು ಬಾಯ್‌ಕಾಟ್ ಮಾಡಿರ ತಕ್ಕಂಥ ವಿಷಯ ಈಗಾಗಲೇ ಮಾನ್ಯ ಸಭೆಯ ಗಮನಕ್ಕೆ ಬಂದು ಇವತ್ತಿನ ದಿವಸ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಯು. ಜಿ. ಸಿ ಸ್ಕೇಲ್ಸ್ ಏನಿದೆ ಅದನ್ನು ಸರ್ಕಾರದವರು ಅನುಷ್ಠಾನಕ್ಕೆ ತರಬೇಕು ಎನ್ನುವಂತಹ ಬೇಡಿಕೆ ಯೊಂದನ್ನು ಅವರು ಪ್ರಮುಖವಾಗಿ ಇದರಲ್ಲಿ ಇಟ್ಟಿದ್ದಾರೆ. ಈಗಾಗಲೇ ಅದಕ್ಕೆ ಉತ್ತರವನ್ನು ಆ ಸದನದಲ್ಲಿ ಕೊಟ್ಟಿದ್ದೇನೆ. ಈಗ ಈ ಸದನದಲ್ಲಿ ಅದಕ್ಕಿಂತಲೂ ಹೆಚ್ಚಿನದಾಗಿ ಉತ್ತರವನ್ನು ಏನೂ ಕೊಡುವುದಕ್ಕೆ ಸಾಧ್ಯವಿಲ್ಲ ಏಕೆಂದರೆ ಸರ್ಕಾರಿ ನೌಕರರ ಸಂಬಳ ಸಾರಿಗೆಗೆ ಸಂಬಂಧಪಟ್ಟಂತಹ ವಿಚಾರವೇ ಕಮಿಷನ್ ಮುಂದೆ ಹೋಗಿರುವುದರಿಂದ ಏಸೋಲೇಟೆಡ್ ಆಗಿ ಟೀಚರ್ಸ್‌ದು ಒಂದನ್ನೇ ತೆಗೆದು ಕೊಂಡು ತೀರ್ಮಾನವನ್ನು ಕೊಡುವುದಕ್ಕೆ ಬರುವುದಿಲ್ಲ. ಅವರು ಅದನ್ನು

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ತತ್ವತಃ ಒಪ್ಪಿಕೊಳ್ಳಿ ಎಂದು ಹೇಳಿದರು ಆದರೆ, ಅದನ್ನು ಆ ರೀತಿಯಲ್ಲಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. ಇವತ್ತು ವಿಶ್ವವಿದ್ಯಾನಿಲಯದ ಅನುದಾನ ಆಯೋಗದವರು ಏನಿದ್ದಾರೆ ಅವರು ಏನು ಸ್ಕೇಲ್‌ಗಳನ್ನು ಗೊತ್ತು ಮಾಡಿದ್ದಾರೆ, ಅದನ್ನು ನಾವು ಅನುಷ್ಠಾನಕ್ಕೆ ತರುವುದಕ್ಕಾಗುವುದಿಲ್ಲ; ಮತ್ತು ಉಪಾಧ್ಯಾಯರುಗಳು ತಮ್ಮ ಮನವಿಯನ್ನು ಪೇ ಕಮಿಷನ್ ಮುಂದೆ ಸಲ್ಲಿಸಬಹುದೆಂದು ಹೇಳಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಪತ್ರವ್ಯವಹಾರವನ್ನೂ ಕೂಡ ಮಾಡಿದ್ದೇವೆ. ಕೇಂದ್ರ ಸರ್ಕಾರದ ವಿದ್ಯಾ ಮಂತ್ರಿಗಳೂ ಕೂಡ ಎಲ್ಲ ರಾಜ್ಯಗಳ ವಿದ್ಯಾ ಮಂತ್ರಿಗಳ ಸಭೆಯೊಂದನ್ನು ಕರೆಯಬೇಕೆಂದು ಹೇಳಿದ್ದಾರೆ. ಅದನ್ನು ಬಹುಶಃ ಮುಂದಿನ ತಿಂಗಳು ಕರೆಯಬಹುದು. ಅವರು 80 ಭಾಗ ಮೊತ್ತ ಕೊಡುತ್ತೇವೆ, 5 ವರ್ಷಗಳ ಕಾಲ ಎಂದು ಹೇಳಿದ್ದಾರೆ. ನಾವು 15 ವರ್ಷಗಳ ವರೆಗಾದರೂ ನಮಗೆ ಕೊಡಬೇಕು, ಏಕೆಂದರೆ ಇದು ಕಮಿಟೆಡ್ ಎಕ್ಸ್‌ಪೆಂಡಿಚರ್ ಆಗುವುದರಿಂದ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿ ಇಲ್ಲದೇ ಹೋದರೆ ಈ ಭಾರವನ್ನು ಪೂರ್ಣವಾಗಿ ಹೊರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೇವೆ. ಅದನ್ನು ಅವರು ತತ್ವತಃ ಒಪ್ಪಿಕೊಂಡಿದ್ದಾರೆ, ಅನುಷ್ಠಾನಕ್ಕೆ ತೆಗೆದುಕೊಂಡು ಬಂದಿಲ್ಲ. ನಾನು ಮೊನ್ನೆ ತಾನೇ ಡೆಲ್ಲಿಗೆ ಹೋಗಿದ್ದಂಥ ಸಂದರ್ಭದಲ್ಲಿ ವಿದ್ಯಾಸಚಿವರನ್ನೂ ಕೂಡ ಕೇಳಿದ್ದೇನೆ ಅದಕ್ಕೆ ಅವರೂ ಕೂಡ ಒಪ್ಪಿಕೊಂಡಿಲ್ಲ ಎಂದು ಹೇಳಿದರು. ಮತ್ತೆ ಕೇರಳದವರೂ ಕೂಡ 1973ನೇ ಇಸವಿಯಲ್ಲಿ 1ನೇ ಜೂನ್ ತಾರೀಖಿನಿಂದಲೇ ನಮ್ಮ ರಾಜ್ಯದ ಪೇ ಕಮಿಷನ್‌ನವರು ಸ್ಕೇಲನ್ನು ಗೊತ್ತುಮಾಡಿದ್ದಾರೆ ಆ ಸ್ಕೇಲನ್ನು 1-6-1974 ರಿಂದ ಅನುಷ್ಠಾನಕ್ಕೆ ತೆಗೆದುಕೊಂಡು ಬಂದಿದ್ದೇವೆ, ಆದುದರಿಂದ ಯು. ಜಿ. ಸಿ. ಯವರು ಕೊಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಅವರು ಹೇಳಿದ್ದಾರೆ ಇದನ್ನೆಲ್ಲಾ ಬೇರೆಕಡೆ ಹೇಳುವುದಕ್ಕಿಂತ ಪ್ರಸ್ತುತದಲ್ಲಿ ನಮ್ಮ ರಾಜ್ಯದಲ್ಲಿ ತೆಗೆದುಕೊಂಡಿರುವುದನ್ನು ಇಲ್ಲಿ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಇದನ್ನೇ ಏಸೋಲೇಟೆಡ್ ಆಗಿ ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಪೇ ಕಮಿಷನ್‌ಗೆ ಉಪಾಧ್ಯಾಯರ ಸಂಘದವರು ತಮ್ಮ ಮನವಿಯನ್ನು ಸಲ್ಲಿಸಬಹುದು ಎಂದು ಈ ಸಂದರ್ಭದಲ್ಲಿ ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಒಂದು ಮಾತು ಹೇಳಿದರು, ಪ್ರತಿ ದಿವಸ ಪದಾರ್ಥಗಳ ಬೆಲೆ ಜಾಸ್ತಿಯಾಗುತ್ತಾ ಇದೆ ನಿತ್ಯ ಬಳಕೆ ವಸ್ತುಗಳ ಬೆಲೆ ಗಗನಕ್ಕೆ ಹೋಗುತ್ತಾ ಇದೆ ಎಂದು. ಇದು ಬರೀ ಉಪಾಧ್ಯಾಯರಿಗೆ ಮಾತ್ರವಲ್ಲ, ಫಿಕ್ಸೆಡ್ ಸ್ಯಾಲರಿ, ಇನ್‌ಕಂ ಇರತಕ್ಕ ಎಲ್ಲಾ ನೌಕರಿಗೂ ತೊಂದರೆ ಇದೆ ಎನ್ನುವುದನ್ನು ನಾನು ಕೇಳಿದ್ದೇನೆ. ಭರತಖಂಡದಲ್ಲಿ ಉತ್ಪನ್ನವಾಗತಕ್ಕ ಬಳಕೆ ವಸ್ತುಗಳಲ್ಲಿ 30 ರಿಂದ 40 ಭಾಗ 10 ಜನ ಶ್ರೀಮಂತರು ಅನು

ಭೋಗ ಮಾಡುತ್ತಿದ್ದಾರೆ. ಯಾವುದನ್ನು ನಾವು ಕನ್‌ಸ್ಯೂಮರ್ ಗೂಡ್ಸ್ ಮತ್ತು ಸರ್ವೀಸಸ್ ಎಂದು ಹೇಳುತ್ತೇವೋ ಅದನ್ನು ಅನುಭೋಗಿಸುವುದರಲ್ಲಿ 100ಕ್ಕೆ 10 ಜನ ಶ್ರೀಮಂತರ ಅಡಿಯಲ್ಲಿ 4ನೇ ದರ್ಜೆ ಒಬ್ಬ ನೌಕರ ಬರುತ್ತಾನೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಬಡತನದ ವೈಶಾಲ್ಯತೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದು. ಬೇರೆಯವರ ಸಂಬಳಸಾರಿಗೆಗಳಿಗೂ ಉಪಾಧ್ಯಾಯರ ಸಂಬಳಸಾರಿಗೆಗಳಿಗೂ ಹೋಲಿಸಿ ನೋಡಿದರೆ, ಎಷ್ಟೋ ನೆಮ್ಮದಿಯಿಂದ ಜೀವನ ಮಾಡತಕ್ಕ ಸಂಬಳಸಾರಿಗೆ ಉಪಾಧ್ಯಾಯರಿಗೆ ದೊರಕುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗುವುದಿಲ್ಲ ಎಂದು ನಾನಾದರೂ ತಿಳಿದುಕೊಂಡಿದ್ದೇನೆ ಆರ್ಥಿಕ ಸೌಲಭ್ಯಗಳು, ವಿದ್ಯಾಭ್ಯಾಸ ಸೌಕರ್ಯಗಳು ಎಲ್ಲರಿಗೂ ಮುಟ್ಟಬೇಕು. ನಾವು ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ನಮಗೆ ಎರಡು ಆಲ್ಟರ್‌ನೇಟೀವ್ಸ್ ಇದೆ. ಸಂಬಳ ಕೊಟ್ಟುಕೊಂಡು ಹೋಗಬೇಕು, ಇಲ್ಲದೇ ಹೋದರೆ ಯೋಜನೆಗಳನ್ನು ಕಾರ್ಯಗತ ಮಾಡಬೇಕು. You will have to choose between two alternatives. ಯೋಜನೆಗಳನ್ನು ಕಾರ್ಯಗತ ಮಾಡಬೇಕು, ಇಲ್ಲದೇ ಹೋದರೆ ಯೋಜನೆ ಬೇಡ ಎಂದು ಸಂಬಳಸಾರಿಗೆಗಳನ್ನು ಕೊಟ್ಟುಕೊಂಡು ಹೋಗುವುದು ಒಂದೇ ಉಳಿದಿರತಕ್ಕದ್ದು, ಆ ದೃಷ್ಟಿಯಿಂದ ನಾನಾದರೂ ಈ ಸಂದರ್ಭದಲ್ಲಿ ಯು. ಜಿ. ಸಿ. ಸ್ಕೇಲನ್ನು ತತ್ವಶಃ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ, ಇದು ಪೇ ಕಮಿಷನ್‌ಗೆ ಹೋಗಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎರಡನೆಯ ವಿಚಾರ, ಪ್ರೈವೇಟ್ ಏಡೆಡ್ ಕಾಲೇಜುಸ್ ಏನು ಇದೆ ಅದರಲ್ಲಿರತಕ್ಕ ಶಿಕ್ಷಕರಿಗೆ ಸಂಬಳಸಾರಿಗೆಗಳನ್ನು 100 ಪರ್ಸೆಂಟ್ ಸರ್ಕಾರವೇ 'ಪೇಮೆಂಟ್ ಬೈ ಚೆಕ್ಸ್' ಕೊಡಬೇಕು ಎನ್ನುವ ಬೇಡಿಕೆ ಇದೆ. ಇದರಿಂದ ಸಂಬಳಸಾರಿಗೆಯ ಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ಹೊತ್ತುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಮುಖ್ಯ ಮಂತ್ರಿಯವರ ಕೊಠಡಿಯಲ್ಲಿ ಸೇರಿದಂಥ ಸಭೆಯಲ್ಲಿ ಹೇಳಿದ್ದಾರೆ, ಮತ್ತು 3-4 ದಿವಸಗಳ ಹಿಂದೆ ನನ್ನ ಕೊಠಡಿಯಲ್ಲಿ ಸಂಧಿಸಿದಾಗ ಕೂಡ ಹೇಳಿದರು. ಇದನ್ನು ತತ್ವಶಃ ಕೂಡ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಬೇಕಾದರೆ ಕಮಿಟಿ ನೇಮಕ ಮಾಡುತ್ತೇವೆ. ಇದರ ಇಂಪ್ಲಿಕೇಷನ್ಸ್ ಏನಾಗುತ್ತದೊ ನೋಡಿಕೊಂಡು ಆ ಮೇಲೆ ಪರಿಶೀಲನೆ ಮಾಡೋಣ. ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಹಣಕಾಸಿಗೆ ಸಂಬಂಧಪಟ್ಟ ಬೇಡಿಕೆಗಳು ಏನು ಇವೆ ಅವೆಲ್ಲವೂ ಕೂಡ ಪೇ ಕಮಿಷನ್ ಮುಂದೆ ಹೋಗಬೇಕು. ಅವರು ಅವುಗಳಾಗುವಾಗಿ ಪರಿಶೀಲನೆ ಮಾಡುತ್ತಾರೆ. ಇನ್ನು ಯಾವ ತೀರ್ಮಾನಗಳನ್ನು ನಾವು ತೆಗೆದುಕೊಂಡಿದೆವೋ ಅದನ್ನು ತೀವ್ರವಾಗಿ ಅನುಷ್ಠಾನಕ್ಕೆ ತರುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳೋಣ. ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕಮಿಟಿಯಲ್ಲಿ ಕುಳಿತು ಚರ್ಚೆಮಾಡೋಣ,

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ತಂದೆತಾಯಿಗಳು ಬಹಳಮಟ್ಟಿಗೆ ಬೇಜಾರಾಗಿದ್ದಾರೆ. ವಿದ್ಯಾರ್ಥಿಗಳೂ ಕೂಡ ಅಷ್ಟೇ ಬೇಜಾರಾಗಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಾಗಿರತಕ್ಕ ಮತ್ತು ಪರೀಕ್ಷೆಗಳಲ್ಲಿ ಕುತೂಹಲ ಇರತಕ್ಕ ಸಂದರ್ಭವನ್ನು ನೋಡಿಕೊಂಡು, ಮಾರ್ಕ್ಸ್ ಮಾಪನ ಮಾಡುವುದಿಲ್ಲ, ಪ್ರಾಕ್ಟಿಕಲ್ ಎಗ್ಸಾಮಿನೇಷನ್ಸ್ ಕಂಡಕ್ಟ್ ಮಾಡುವುದಿಲ್ಲ ಎಂದು ಉಪಾಧ್ಯಾಯರು ಏನು ಒಂದು ಬಹಿಷ್ಕಾರವನ್ನು ಹಾಕಿದ್ದಾರೋ, ಇಂಥಾ ಒಂದು ಬಹಿಷ್ಕಾರವನ್ನು ಹಾಕಬಾರದಾಗಿತ್ತು. ನಾನು ಅವರಿಗೆ ಮನವಿ ಮಾಡಿಕೊಂಡೆ. ವರ್ಷವೆಲ್ಲಾ ಪಾಠ ಹೇಳಿ, ವರ್ಷದ ಕೊನೆಯಲ್ಲಿ ಪರೀಕ್ಷೆಗಳನ್ನು ನಡೆಸತಕ್ಕಂಥಾದ್ದು ಉಪಾಧ್ಯಾಯರ ಅವಿಭಾಜ್ಯ ಕರ್ತವ್ಯ. ಆ ದೃಷ್ಟಿಯಿಂದಲಾದರೂ ಅವರು ಮಾಡಬೇಕಾಗಿತ್ತು. ಉಪಾಧ್ಯಾಯರ ಈ ಒಂದು ನಿರ್ಧಾರವನ್ನು ತೆಗೆದುಕೊಂಡಿರುವುದರಿಂದ ವಿದ್ಯಾರ್ಥಿಗಳು ತೊಂದರೆಗೆ ಈಡಾಗಿದ್ದಾರೆ. ನಾನು ಈಗಾಗಲೇ ಅವರಿಗೆ ಮನವಿ ಮಾಡಿಕೊಂಡಿದ್ದೇನೆ. ಬಹುಶಃ ಈ ಉಪಾಧ್ಯಾಯರು ಏನು ಒಂದು ನಿರ್ಧಾರ ತೆಗೆದುಕೊಂಡು ಪರೀಕ್ಷೆಗಳಿಗೆ ಬಹಿಷ್ಕಾರ ಹಾಕಿದ್ದಾರೋ ಅದಕ್ಕೆ ಅವರು ವಿಷಾದ ಪಡುತ್ತಾ ಇದ್ದಾರೆ ಎಂದು ನಾನಾದರೂ ಅಂದುಕೊಂಡಿದ್ದೇನೆ. ಇಷ್ಟನ್ನು ಹೇಳಿದ್ದೇನೆ. ಇದಕ್ಕಿಂತ ಜಾಸ್ತಿ ಹೇಳುವುದಕ್ಕೆ ಇಷ್ಟಪಡದೆ, ಮಾನ್ಯ ಸದಸ್ಯರು ತೆಗೆದುಕೊಂಡು ಬಂದಿರತಕ್ಕ ಉಪಾಧ್ಯಾಯರಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಕಮಿಟಿಯಲ್ಲಿ ಪರಿಶೀಲನೆ ಮಾಡುತ್ತೇವೆ. ಇದರ ಜೊತೆಗೆ ಅದು ಪೇ ಕಮಿಷನ್‌ಗೆ ಹೋಗಬೇಕು. ಮಾನ್ಯ ಸಭೆಯ ಮುಖೇನ, ತಮ್ಮ ಮುಖೇನ ಮತ್ತೊಮ್ಮೆ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ ಉಪಾಧ್ಯಾಯರು ಏನು ಬಹಿಷ್ಕಾರ ಹಾಕಿದ್ದಾರೋ, ಅದು ಸರಿಯಲ್ಲ, ಅದು ಉಪಾಧ್ಯಾಯ ವೃತ್ತಿಗೇ ಗೌರವತರತಕ್ಕದ್ದಲ್ಲ. 'ಆಚಾರ್ಯ ದೇವೋಭವ' ಎಂಬ ಆರ್ಷೋಕ್ತಿಯ ಗುಣಮಟ್ಟವನ್ನು ಮುಟ್ಟಬೇಕಾದರೆ ಉಪಾಧ್ಯಾಯರುಗಳು ದೇಶದಲ್ಲಿರತಕ್ಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕು. ದೇಶದ ಆರ್ಥಿಕ ಪರಿಸ್ಥಿತಿ ಹೇಗೆನ್ನಾಗಿ ಆದರೆ ಸಂಬಳಸಾರಿಗೆಗಳು ಕೂಡ ಹೆಚ್ಚಾಗುತ್ತಾ ಹೋಗುತ್ತವೆ ಎಂದು ಅರ್ಥಮಾಡಿಕೊಳ್ಳ ಶಕ್ತಿ ಉಪಾಧ್ಯಾಯರಿಗೆ ಇದೆ ಎಂದು ನಾನಾದರೂ ಭಾವಿಸುತ್ತೇನೆ. ಈಗಾಗಲೇ ಅವರು ಬಹಿಷ್ಕಾರ ಮಾಡಿರುವುದಕ್ಕೆ ವಿಷಾದಪಟ್ಟಿದ್ದಾರೆ. ಆದುದರಿಂದ ಬಹಿಷ್ಕಾರ ಏನು ಉಪಾಧ್ಯಾಯರು ಹಾಕಿದ್ದಾರೆ ಅದನ್ನು ಶೀಘ್ರವಾಗಿ ನಿಲ್ಲಿಸಿ ತಮ್ಮ ತಮ್ಮ ಕೆಲಸಗಳನ್ನು ಕೈಗೊಳ್ಳಬೇಕು, ಪರೀಕ್ಷೆಗಳನ್ನು ಮಾಡತಕ್ಕಂಥ ಕಾರ್ಯವನ್ನು ತೆಗೆದುಕೊಳ್ಳಬೇಕು ಎಂದು ಮತ್ತೊಮ್ಮೆ ಮನವಿಮಾಡಿಕೊಂಡು, ನನ್ನ ಹೇಳಿಕೆಯನ್ನು ನಿಲ್ಲಿಸುತ್ತೇನೆ

ಶ್ರೀ ಎಸ್. ಬಂಗಾರಪ್ಪ;—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು.

ಅಧ್ಯಕ್ಷರು :—ಈಗ 3 ಗಂಟೆಗೆ 10 ನಿಮಿಷ ಇದೆ. ಇವತ್ತು ಎರಡು ಪ್ರಾಮುಖ್ಯವಾದ ಬೇಡಿಕೆಗಳು ಇವೆ. ನಾವು ಇದಕ್ಕೇ ಕಾಲ ತೆಗೆದುಕೊಳ್ಳುತ್ತೇವೆ ನಮಗೆ ಅದು ಬೇಡ ಎಂದರೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಎಸ್. ಬಂಗಾರಪ್ಪ :—2 ಲಕ್ಷ ಜನ ಮಕ್ಕಳು ಇದ್ದಾರೆ. ಅವರಿಗೆ ಪರೀಕ್ಷೆಗಳು ಇಲ್ಲದ ಹಾಗೆ ಆಗುತ್ತದೆ. 5-10 ನಿಮಿಷ ಕಾಲ ತೆಗೆದುಕೊಂಡರೆ ಏನಾಗುವುದಿಲ್ಲ.

ಅಧ್ಯಕ್ಷರು :— ಜಾಸ್ತಿ ವೇಳೆ ತೆಗೆದುಕೊಂಡರೆ ಕಷ್ಟವಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ :— ಅವರು ಕೇಳಿದಷ್ಟು ಕೊಟ್ಟು ಹೋಗೋಣವೇ ?

ಶ್ರೀ ಎಸ್. ಬಂಗಾರಪ್ಪ :— ಇವತ್ತಿನ ದಿವಸ ಉಪಾಧ್ಯಾಯರುಗಳು ಪರೀಕ್ಷೆಗಳಿಗೆ ಬಹಿಸ್ಕಾರ ಹಾಕಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ವಿದ್ಯಾ ಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದಾರೆ, ಅದರಿಂದ, ಉಪಾಧ್ಯಾಯರುಗಳು ಮುಷ್ಕರವನ್ನು ನಿಲ್ಲಿಸಿ, ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಅನುಕೂಲ ಮಾಡಿಕೊಡುತ್ತಾರೆ ಎಂಬ ಆಶಾಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಈಗಾಗಲೇ, ಉಪಾಧ್ಯಾಯರುಗಳು ಮುಷ್ಕರ ಹೂಡಿರುವುದರಿಂದ ಎರಡು ಲಕ್ಷ ಮಂದಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಗಳಾಗಿವೆ. ಯು. ಜಿ. ಸಿ. ಸ್ಕೇಲ್ ಪ್ರಕಾರ ಸಂಬಳ ಕೊಡುವುದು ; ಚೆಕ್ ಸಿಸ್ಟಂ ಮೇರೆಗೆ ಸಂಬಳ ಪಾವತಿ ಮಾಡುವುದು ; ಮತ್ತು ಪ್ರೈವೇಟ್ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳಿಗೆ 6-7-8 ತಿಂಗಳುಗಳು ಸಂಬಳ ಕೊಡದೇ ಇರುವುದು--ಇನ್ನೂ ಹಲವಾರು ಬೇಡಿಕೆಗಳು ಇವೆ. ಅವಕ್ಕೆಲ್ಲಾ ಬೆಂಬಲ ಕೊಡೋಣ ; ಅದರ ಬಗ್ಗೆ ವಿಚಾರ ಮಾಡೋಣ. ಆದರೆ, ಚೆಕ್ ಸಿಸ್ಟಂ ಮುಖಾಂತರ ಸಂಬಳ ಪಾವತಿ ಮಾಡಬೇಕಾದರೆ ಅದರಲ್ಲಿ ಹಲವಾರು ನ್ಯೂನತೆಗಳಿವೆ, ಅವುಗಳನ್ನೆಲ್ಲಾ ಪರಿಶೀಲನೆ ಮಾಡಬೇಕಾಗುತ್ತದೆ. ಇದನ್ನು ನಾನು ಒಪ್ಪುತ್ತೇನೆ ಈಗ ಮಾನ್ಯ ಮಂತ್ರಿಗಳು ಉಪಾಧ್ಯಾಯರುಗಳಿಗೆ ಮುಷ್ಕರವನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆಯೇ ಹೊರತು, ಸರ್ಕಾರದೊಡನೆ ಉಪಾಧ್ಯಾಯರುಗಳು ಮಾಡಿದ ಸಂದಾನ ಎಲ್ಲಿಯವರೆಗೆ ಬಂತು ; ಇವತ್ತಿನ ದಿವಸ ಪರೀಕ್ಷೆಗೆ ಹಾಜರಾಗಲು ಸಿದ್ಧವಾಗಿರುವ ಎರಡು ಲಕ್ಷ ಮಂದಿ ವಿದ್ಯಾರ್ಥಿಗಳಿಗೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ತಿಳಿಸಲಿಲ್ಲ. ಒಂದು ವೇಳೆ ಉಪಾಧ್ಯಾಯರು ಇದಕ್ಕೂ ಮೀರಿ ಮುಷ್ಕರ ಹೂಡುತ್ತೇವೆ ಎಂದು ಹಠ ಮಾಡುವುದಾದರೆ, ರಾಜ್ಯದಲ್ಲಿರುವ ಮೂರು ವಿಶ್ವವಿದ್ಯಾನಿಲಯಗಳೂ ಸೇರಿ ಮಾತನಾಡಿ ಯಾವ ತೀರ್ಮಾನಕ್ಕೆ ಬರುತ್ತಾರೆ ಎಂಬ ವಿಷಯವನ್ನು ತಿಳಿಸಬೇಕು.

(ಶ್ರೀ ಎಸ್. ಬಂಗಾರಪ್ಪ)

ಇವತ್ತಿನ ದಿವಸ ಉಪಾಧ್ಯಾಯರುಗಳಿಗೆ ಏನೇನು ಸೌಲಭ್ಯ ಬೇಕು, ಅವೆಲ್ಲ ವನ್ನೂ ಕೊಡೋಣ ಆದರೆ, ಹೀಗೆ ಮುಷ್ಕರ ಮಾಡಿ, ಎರಡು ಲಕ್ಷ ಮಂದಿ ವಿದ್ಯಾರ್ಥಿಗಳನ್ನು ಬೀದಿಗೆ ಎಳೆಯುತ್ತಿದ್ದಾರೆ. ಆದುದರಿಂದ, ಇದರ ಬಗ್ಗೆ ರಾಜ್ಯ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕಾಗಿ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್:—ಮಾನ್ಯ ವಿದ್ಯಾ ಮಂತ್ರಿಗಳು ಎರಡು ಮುಖ್ಯ ವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಉಪಾಧ್ಯಾಯರುಗಳಿಗೆ ಯು. ಜಿ. ಸಿ. ಸ್ಕೇಲನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇವತ್ತಿನ ದಿವಸ ನಾವು ಯೋಜನೆಗಳಿಗಾಗಿ ಹಣ ಖರ್ಚು ಮಾಡಬೇಕಾಗಿದೆ. ಆದುದರಿಂದ, ಅದನ್ನು ಬಿಡಬೇಕೇ ಅಥವಾ ಇದಕ್ಕೆ ಖರ್ಚು ಮಾಡಬೇಕೆ ಎಂದು ಒಂದಕ್ಕೊಂದಕ್ಕೆ ಸಂಬಂಧ ಕಲ್ಪಿಸಿದ್ದಾರೆ. ಇದು ಸೈದ್ಧಾಂತಿಕವಾದುದು, ಅತಿ ಮುಖ್ಯವಾದ ಪ್ರಶ್ನೆಯೂ ಹೌದು. ಆದರೆ, ಅವರ ಬೇಡಿಕೆಗಳು ಇದೊಂದೇ ಅಲ್ಲ. ಇನ್ನೂ ಬೇರೆ ಬೇರೆ ಬೇಡಿಕೆಗಳನ್ನು ಇಟ್ಟಿದ್ದಾರೆ. ಆದುದರಿಂದ, ತಾವು ಚೆಕ್ ಸಿಸ್ಟಂ ಬಗ್ಗೆ ಏನು ಹೇಳುತ್ತೀರಿ? ಅವರ ಇತರ ಬೇಡಿಕೆಗಳ ಬಗ್ಗೆ ರಾಜ್ಯದ ಮೂರು ವಿಶ್ವ ವಿದ್ಯಾ ನಿಲಯಗಳೊಡನೆ ಏನಾದರೂ ಚರ್ಚೆ ನಡೆದಿದೆಯೇ? ಹಾಗೇನಾದರೂ ಚರ್ಚೆ ನಡೆದಿದ್ದರೆ, ಅವರ ಬೇಡಿಕೆಗಳನ್ನು ಸರಕಾರದವರು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೀರಾ? ತಾವು ಹಣವಿಲ್ಲ, ಹಣವಿಲ್ಲ ಎಂಬುದನ್ನು ಎಲ್ಲದಕ್ಕೂ ತೋರಿಸುತ್ತಾ ಇದ್ದೀರಿ. ರಾಜ್ಯ ಸರಕಾರದ ನೌಕರರಿಗಾಗಲೀ, ಬೇರೆ ಇತರ ನೌಕರರಿಗಾಗಲೀ ಹಣ ಇಲ್ಲ ಎಂದು ಹೇಳುತ್ತಾ ಇದ್ದೀರಿ. ಆದರೆ, ಹಣವನ್ನು ಯಾವ ರೀತಿ ಪಡೆಯಬೇಕೆಂಬ ಬಗ್ಗೆ ಸೈದ್ಧಾಂತಿಕವಾಗಿ ಪ್ರಸ್ತಾಪ ಮಾಡಿದ್ದೀರಾ?

SRI M. MALLIKARJUNA SWAMY.—We cannot create money out of this air.

SRI M. S. KRISHNAN:—But you can atleast take some steps so that you will get money. That is an important thing.

ಶ್ರೀ ಟಿ. ಆರ್. ಶಾಮಣ್ಣ:— ಮಾನ್ಯ ಸಭಾಧ್ಯಕ್ಷಣಿಯವರೇ, ಕಳೆದ ನಲವತ್ತು ವರ್ಷಗಳಿಂದಲೂ ನಾನು ಉಪಾಧ್ಯಾಯನಾಗಿ ಕೆಲಸ ಮಾಡಿದ್ದೇನೆ, ಈಗಲೂ ಮಾಡುತ್ತಾ ಇದ್ದೇನೆ. ಈಗ ನನಗೆ ಏಳು ಜನ ಮಕ್ಕಳಿದ್ದಾರೆ, ಅವರಲ್ಲಿ ನಾಲ್ಕು ಜನ ಕಾಲೇಜಿನಲ್ಲಿ ಓದುತ್ತಾ ಇದ್ದಾರೆ. ಈಗ ನನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೇಕಾದಂಥ ಫೀಸ್ ವಗೈರೆ ವೆಚ್ಚಗಳನ್ನು ನಾನು ನೂರ ಸಹಾ

ಯವೂ ಇಲ್ಲದೆ, ನನ್ನ ಕೈಯಿಂದಲೇ ಕೊಡುತ್ತಾ ಇದ್ದೇನೆ. I am an income tax paver and I am a tax-payer and I have every right to tell Government about this. ಮೊದಲನೆಯದಾಗಿ, ನಾನು ಸರಕಾರವನ್ನು ಎಲ್ಲದಕ್ಕೂ ಹೊಣೆಗಾರಿಕೆ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಈಗ ಆ ರೀತಿಯಾವಂಥ ಒಂದು ಪರಿಸ್ಥಿತಿ ಉದ್ಭವವಾಗಿದೆ. ಒಂದು ಕಡೆ ವೈದ್ಯರುಗಳ ಮುಷ್ಕರ, ಇನ್ನೊಂದು ಕಡೆ ಪೋಲೀಸಿನವರ ಮುಷ್ಕರ, ಮತ್ತೊಂದು ಕಡೆ ಉಪಾಧ್ಯಾಯರುಗಳ ಮುಷ್ಕರ ನಡೆಯುತ್ತಾ ಇವೆ. ಈಗ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮ ಬೇಡಿಕೆಗಳು ಈಡೇರಬೇಕಾದರೆ, ಮುಷ್ಕರ ಅಥವಾ ಘೆರಾವ್ ಮಾಡಿದರೆ ಬಗೆಹರಿಯುತ್ತವೆ ಎನ್ನುವ ಒಂದು ವಾತಾವರಣ ಇವತ್ತಿನ ದಿವಸ ಕಲ್ಪಿಸಿರುವುದರಿಂದ, ಮುಷ್ಕರಗಳು ಆಗಿಂದಾಗ್ಗೆ ಈ ದೇಶದಲ್ಲಿ ಆಗುತ್ತಾ ಇವೆ. ಈ ರೀತಿ, ವೈದ್ಯರು, ಉಪಾಧ್ಯಾಯರು, ಪೋಲೀಸರು ಮುಂತಾದವರು ಮುಷ್ಕರ ಮಾಡುತ್ತಾ ಹೋದರೆ, ನಮ್ಮ ದೇಶ ಯಾವ ರೀತಿ ಮುಂದುವರಿಯುತ್ತದೆ ಎಂಬುದೇ ನನಗೆ ಒಂದು ದೊಡ್ಡ ವ್ಯಥೆಯಾಗಿದೆ.

ನಾನು ನ್ಯಾಷನಲ್ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದೆ. ಬೇರೆ ಕಡೆ 500 ರೂಪಾಯಿ ಸಂಬಳ ಬರುತ್ತಿದ್ದರೂ ಕೂಡ ನಮ್ಮ ಉಪಾಧ್ಯಾಯರು ಪ್ರೈವೇಟ್ ಟ್ಯೂಷನ್ ಇಟ್ಟುಕೊಳ್ಳದೇ ಬೆಳಿಗ್ಗೆಯಿಂದ ಹಿಡಿದು ಸಾಯಂಕಾಲದ ವರೆಗೂ ಪಾಠ ಹೇಳಿ ಕೊಡುತ್ತಿದ್ದರು. ಅಷ್ಟು ಮಟ್ಟಿಗೆ ಉಪಾಧ್ಯಾಯರು ಹುಡುಗರ ಬಗ್ಗೆ ಅಸಕ್ತಿಯನ್ನು ವಹಿಸಿದ್ದಾರೆ, ಅದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು. ಏಕೆಂದರೆ, ನನಗೆ ಐಶ್ವರ್ಯವಿದೆ, ಅಂತಸ್ತು ಇದೆ, ಆದರೆ ನಾನು ಉಪಾಧ್ಯಾಯನಾಗಿ ಇರತಕ್ಕ ಹೆಮ್ಮೆ ಬೇರೆ ಯಾವ ವಿಷಯದಲ್ಲೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಬಲ್ಲೆ ನನಗೆ ಅರವತ್ತು ವರ್ಷಗಳು ಆದರೂ ಕೂಡ ಇವತ್ತೂ ಕೂಡ ಕ್ಲಾಸ್ ತೆಗೆದುಕೊಳ್ಳದೇ ಹೋದರೆ ನಿದ್ರೆಯೇ ಬರುವುದಿಲ್ಲ. ಆದುದರಿಂದ ಸರಕಾರದವರಲ್ಲಿ ನಾನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ಸರಕಾರ ಈ ವಿಚಾರದಲ್ಲಿ ಚೌಕಾಸಿ ಮಾಡದೆ, ಪ್ರತಿಯೊಂದು ವಿಷಯವನ್ನೂ ಸಸ್ಪೆನ್ಷನ್‌ಲ್ಲಿ ಇಟ್ಟು ಒತ್ತಡಗಳು ಬಂದಾಗ ಮಾತ್ರ ಒಂದು ತೀರ್ಮಾನ ತೆಗೆದು ಕೊಳ್ಳುವುದಾದರೆ, ನಾನು ಹೇಳುತ್ತೇನೆ ಖಂಡಿತ ಸಮಸ್ಯೆಗಳು ಬಗೆಹರಿಯುವುದಿಲ್ಲ. ಆದುದರಿಂದ, ತಾವು ಅವರಿಗೆ ಎಲ್ಲಿಯವರೆಗೆ ಸಹಾಯ ಮಾಡುವುದಕ್ಕಾಗುತ್ತದೆಯೋ ಅಲ್ಲಿಯವರೆಗೂ ಮಾಡಿ. ನಾನು ಒಬ್ಬ ಉಪಾಧ್ಯಾಯನಾಗಿ, ಒಬ್ಬ ಮಕ್ಕಳ ತಂದೆಯಾಗಿ ಹುಡುಗರಿಗೆ ಫೀಸ್ ಕೊಡುತ್ತಿದ್ದೇನೆ. ತಾವು ಎಲ್ಲವನ್ನೂ ರ್ಯಾನ್‌ಸಮ್ ಆಗಿ ಇಟ್ಟುಕೊಂಡು ನಮ್ಮ ಕಷ್ಟಕ್ಕೆ ಸಿಕ್ಕಿಸಬೇಡಿ. ಈಗ ಉಪಾಧ್ಯಾಯರುಗಳೇ ಉಪವಾಸ ಮಾಡುತ್ತೇವೆ, ಸತ್ಯಾಗ್ರಹ ಮಾಡುತ್ತೇವೆ ಎಂದು ಹೋದರೆ, ಇನ್ನು ವಿದ್ಯಾರ್ಥಿಗಳಿಗೆ ಶಿಸ್ತು ಎಲ್ಲಿಂದ ಬರುತ್ತದೆ. ಅವರು ಯಾವ ರೀತಿ ಕಲಿಯುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ, ನಾನು, ಉಪಾ

(ಶ್ರೀ ಟಿ. ಆರ್. ಶಾಮಣ್ಣ:)

ಧ್ಯಾಯ ವರ್ಗದಲ್ಲಿ ಕೈಮುಗಿದು ಬೇಡಿಕೊಳ್ಳುವುದೇನೆಂದರೆ, ನಿಮ್ಮದೇನಾದರೂ ಸಮಸ್ಯೆಗಳು ಇದ್ದರೆ, ಅದರ ಬಗ್ಗೆ ನಾವು ಉಪವಾಸ ಮಾಡಿ ಸಾಯುವುದಕ್ಕೂ ಸಿದ್ಧವಾಗಿದ್ದೇವೆ. ಆದರೆ ತಾವು ದಯವಿಟ್ಟು ಮುಷ್ಕರ ಮುಂತಾವುಗಳನ್ನು ಮೂಡಿ ಮಕ್ಕಳನ್ನು ಮಾತ್ರ ಕೊಲೆ ಮಾಡಬೇಡಿ, ಇದರಿಂದ ಇಂಜಿನಿಯರ್, ಡಾಕ್ಟರ್ ಕೋರ್ಸ್ ಓದುತ್ತಾ ಇರುವವರಿಗೆಲ್ಲಾ ತೊಂದರೆಯಾಗುತ್ತಾ ಇದೆ. ಅನೇಕ ಬಡ ಮಕ್ಕಳಿಗೆ ತೊಂದರೆಯಾಗುತ್ತಾ ಇದೆ; ತಾವು ದಯವಿಟ್ಟು ಮುಷ್ಕರ ಹೂಡಿ ಬೀದಿಗೆ ಬರಬೇಡಿ. ಬೇಕಾದರೆ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲು ನಾವು ತ್ಯಾಗ ಮಾಡಲು ಕೂಡ ಸಿದ್ಧರಾಗಿದ್ದೇವೆ ಎಂದು ಹೇಳುತ್ತೇನೆ.

ಈಗ ಮಾನ್ಯ ಮಂತ್ರಿಗಳು, ವಿದ್ಯಾರ್ಥಿಗಳ ಪರೀಕ್ಷೆ ನಡೆಸುವುದಕ್ಕೆ ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ, ಮತ್ತು ಉಪಾಧ್ಯಾಯರು ತಮ್ಮ ನಿಲುವನ್ನು ಮುಂದುವರಿಸಿದರೆ, ಏನು ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು. ಕೊನೆಯದಾಗಿ ಉಪಾಧ್ಯಾಯ ವರ್ಗದಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಿಮ್ಮ ಪರವಾಗಿ ಕೋಣಂದೂರು ಲಿಂಗಪ್ಪ, ಶ್ರೀ ಕೃಷ್ಣನ್ ಮತ್ತು ಎಲ್ಲರೂ ಕೂಡ ಯಾವುದೇ ರೀತಿಯಾದ ತ್ಯಾಗ ಮಾಡಲು ಸಿದ್ಧರಿದ್ದೇವೆ ತಮಗೆ ನ್ಯಾಯ ದೊರಕಿಸಿಕೊಡಲು ನಾವು ಸಿದ್ಧರಿದ್ದೇವೆ. ತಾವು ದಯವಿಟ್ಟು ಹುಡುಗರ ತಂದೆತಾಯಿಗಳಿಗೆ ಹಿಂಸೆ ಕೊಡಬೇಡಿ.

3-00 P.M.

ಶ್ರೀ ಡಿ ದೇವರಾಜ್ ಅರಸ್:—ನಮ್ಮ ದೃಷ್ಟಿಯಿಂದ ಇನ್ನು ಮೇಲಾದರೂ ಉಪಾಧ್ಯಾಯರುಗಳು ಅವರ ಮುಷ್ಕರವಾಗಲಿ, ಅವರು ಹಾಕಿರತಕ್ಕ ಬಹಿಷ್ಕಾರವನ್ನಾಗಲಿ, ಹಿಂದಕ್ಕೆ ತೆಗೆದುಕೊಂಡು ಅವರು ಎಕ್ಸಾಮಿನೇಷನ್ ನಡೆಸಬೇಕು; ಅದು ಅವರ ಜವಾಬ್ದಾರಿ, ಅವರ ಕರ್ತವ್ಯ. ಈಗ 12 ತಿಂಗಳಿನಿಂದ ಪಾಠ ಹೇಳಿದ್ದಾರೆ, ಈಗ 2 ಲಕ್ಷ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಿರತಕ್ಕ ಮಕ್ಕಳ ಭವಿಷ್ಯವನ್ನು ಹಾಳು ಮಾಡಿ, ಹೆದರಿಸಿ ಸರ್ಕಾರವನ್ನು ಬಗ್ಗಿಸುತ್ತೇವೆ ಎಂದು ಹೇಳುವುದಾದರೆ, ಸರ್ಕಾರಕ್ಕೂ ಬೇರೆ ದಾರಿ ಇದೆ. ನನ್ನ ದೃಷ್ಟಿಯಲ್ಲಿ ಇವರ ಬಗ್ಗೆ ಒಂದೆರಡು ಸಾರಿ ಮಾತನಾಡಿದ್ದೇನೆ. ಇನ್ನು ಅವರು ಮುಂದುವರೆಸಬೇಕು ಎಂದರೆ ಅದರ ಬಗ್ಗೆ ನಾನು ಏನು ಹೇಳುವುದಕ್ಕೂ ಇಚ್ಛೆಪಡುವುದಿಲ್ಲ. ಅವರು ಬಹಿಷ್ಕಾರ ಹಿಂದಕ್ಕೆ ತೆಗೆದುಕೊಂಡು ಎಕ್ಸಾಮಿನೇಷನ್ ಕಂಡಕ್ಟ್ ಮಾಡದ ಹೊರತು, ನಾನು ಅವರ ಡಿಮ್ಯಾಂಡ್ ಪ್ರಶ್ನೆ ಹೇಳುತ್ತಿಲ್ಲ, ಎರಡನೆಯದು ಒಂದು ವೇಳೆ ಮುಷ್ಕರ ಹೂಡಿದರೆ ಕಾನೂನು ಪ್ರಕಾರ ಸಸ್ಪೆಂಡ್, ಅಥವಾ ಡಿಸ್‌ಮಿಸ್

ಮಾಡುವುದಕ್ಕೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಅವರನ್ನು ಸಸ್ಪೆಂಡ್ ಮಾಡಿ ಬೇರೆಯವರನ್ನು ನೇಮಕ ಮಾಡಬೇಕಾಗುತ್ತದೆ, ನಂತರ ಎಕ್ಸಾಮಿನೇಷನ್ ಕಂಡಕ್ಟ್ ಮಾಡಬೇಕಾಗುತ್ತದೆ ಇದರಿಂದ ಸ್ವಲ್ಪ ನಿಧಾನ ಆಗಬಹುದು.

ಶ್ರೀ ಕೆ. ಹೆಚ್. ಹನುಮೇಗೌಡ:...ಈಗ ಮಕ್ಕಳ ಭವಿಷ್ಯ ಹಾಳಾಗಿ ಹೋಗುತ್ತದೆ ಅದಕ್ಕೆ ಹೇಳಿದ್ದು.

ಶ್ರೀ ಡಿ. ದೇವರಾಜ್ ಅರಸ್: ತಾವು ಈ ಕೋಪ ಅಲ್ಲಿ ಬಿಡಿ.

ಶ್ರೀ ಎಂ. ಎಸ್. ಕೃಷ್ಣನ್:—ತಾವು ಹೇಳುವ ಮಟ್ಟಕ್ಕೆ ಬಂದಿದೆಯೇ?

SRI D. DEVARAJ URS :—We will wait for at the most 3 or 4 days. If they do not do it, I am sure you will also support the Government in whatever disciplinary action we propose to take, and I think we will take it.

SRI M. S. KRISHNAN :—I am not one of those who agree with you to take disciplinary action against those people. I want it to be settled honourably.

SRI D. DEVARAJ URS :—What is it that I should do ?

SRI M. S. KRISHNAN :—I want it to be settled honourably.

SRI D. DEVARAJ URS :—If they stick to 'bahiskara' I am not prepared to do it.

ಶ್ರೀ ಎಸ್. ಬಂಗಾರಪ್ಪ:—ಈ ವಿಷಯದಲ್ಲಿ ರಾಜಿ ವಿಷಯಕ್ಕೆ ಬಂದಿದ್ದಾರೆ ಎಂದು ಹೇಳಿದಿರಿ, ಪರೀಕ್ಷೆ ಪ್ರಾರಂಭವಾಗಲಿ, ಹೋಗಿ ಆಮೇಲೆ ನೋಡೋಣ ಎಂದು ತಾವು ಒಂದು ಷರತ್ತು ಹಾಕಲಿಲ್ಲವೇ?

ಶ್ರೀ ಡಿ ದೇವರಾಜ್ ಅರಸ್: ಅವರಲ್ಲಿ ನಾನು ಅಪೀಲು ಮಾಡಿದ್ದೇನೆ ಅದು ಏನು ಎಂದರೆ ಇನ್ನು ಮೇಲಾದರು ತಾವು ಬಹಿಷ್ಕಾರ ಹಾಕುವುದನ್ನು ಬಿಟ್ಟು, ತಮ್ಮ ಕೆಲಸವನ್ನು ಮುಂದುವರಿಸಿ, ಬೇರೆ ವಿಚಾರ ಮಾತನಾಡೋಣ

(ಶ್ರೀ ಡಿ. ದೇವರಾಜ ಅರಸ್)

ಎಂದು ಹೇಳಿದ್ದೇನೆ. ಇದನ್ನು ಮತ್ತೆ ಮತ್ತೆ ಎಷ್ಟು ಸಾರಿ ಹೇಳಬೇಕು. ಕೆಲವು ವಿಚಾರಗಳು ಅಷ್ಟು ಸುಲಭವಲ್ಲ ಇದರಲ್ಲಿ ಒಂದು ವಿಚಾರ ಅಲ್ಲ, ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹೋದರೆ ರ್ಯಾಮಿಫಿಕೇಷನ್ ಬೇಕಾದಷ್ಟು ಇದೆ, ಅಷ್ಟು ಸುಲಭವಾಗಿ ಹೇಳಿದ ಕೂಡಲೇ ಒಪ್ಪಿಬಿಟ್ಟರೆ ನಾಳೆ ಆಗತಕ್ಕ ಪರಿಣಾಮ ಎಲ್ಲಾ ಎದುರಿಸಬೇಕಾಗುತ್ತದೆ. ಹಣದ ವಿಚಾರ ಇದೆ, ಇದು ಅಷ್ಟು ಸುಲಭವಾದ ವಿಚಾರ ಅಲ್ಲ. ತಾವು ಒಂದೆರಡು ವಿಚಾರಗಳನ್ನು ಹೇಳಿದಿರಿ ಚೆಕ್ ಸಿಸ್ಟಂ ಪ್ರಕಾರ ಕೊಡಬೇಕು ಎಂದು. Indirectly, does the hon. members know what it means? The moment the Government accepts to give cheques, hundred percent we have to pay, because it is we who have to give the cheques. Whether the private institutions make good 20 per cent of their share or not, I will be taking the responsibility of paying all these thousands and thousands of teachers, if we accept the cheque system, through our Exchequer upto 100 per cent. Indirectly you are circumventing the Grant-in-Aid Code. How does hon. members expect me to accept it straightaway? I am prepared to give 80 per cent of what we have been giving by way of grants.

ಶ್ರೀ ಟಿ. ಆರ್. ಶಾಮಣ್ಣ :—ತಾವು ಹೈಸ್ಕೂಲುಗಳಿಗೆ ಕೊಡುತ್ತೀರಾ, ನವುಗೆ ಏತಕ್ಕೆ ಕೊಡುತ್ತಿಲ್ಲ ಎಂದು ಕೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್ : ...ಹೈಸ್ಕೂಲಿಗೂ ಇದಕ್ಕೂ ಹೋಲಿಸಬೇಡಿ. I am prepared to give upto 80 per cent. I am asking the private institutions to give 20 per cent who are in a position to make good this amount.

SRI M. S. KRISHNAN :—When High school teachers are being paid by cheques, why not the same benefit be extended to these people also?

SRI D. DEVARAJ URS :—I am willing to pay 80 per cent. Please ask them whether they are willing? We are prepared to give our 80 percent share through cheques. Such of the institutions which are not in a position to give their share of 20 per cent, let them be closed!

ಶ್ರೀ ಕಾಗೋಡು ತಿಮ್ಮಪ್ಪ :...ಈಗ ವರ್ಷದಲ್ಲಿ 2 ತಿಂಗಳು ರಜೆ ಇರುತ್ತಾರೆ. 10 ತಿಂಗಳು ಸಂಬಳ ತೆಗೆದುಕೊಳ್ಳುತ್ತಾರೆ, ಎರಡು ತಿಂಗಳು ಬಿಟ್ಟು ಬಿಡಿ.

SRI D. DEVARAJ URS : -That is why I said that these are all matters of detail. What the hon member says is one solution. More than all that, I do not really understand the attitude of my good friend Sri M. S. Krishnan. Let him not act as a Labour Leader here.

SRI M. S. KRISHNAN: I am not looking at the problem from the point of view of Trade Union Movement. I am as such interested in this as the Honbl'e Chief Minister.

SRI D. DEVARAJ URS —I do appreciate the bargaining capacity of the hon. member Sri Krishnan as a Trade Union Leader !

SRI S. BANGARAPPA :—I am sure my friend Sri Krishnan will not consider College teachers as labourers working in a factory.

SRI D. DEVARAJ URS :... I am thankful.

SRI M. S. KRISHNAN :—Teachers are not like workers they have certain interests. They are a class by themselves.

SRI D. DEVARAJ URS :—So, Sri Krishnan has the sympathy of the classes. I am sure he does have that sympathy !

SRI M. S. KRISHNAN :—I must have the sympathy. The point is, how to solve the problem which is there.

SRI D. DEVERAJ URS :—Sri Krishnan, as a Trade Union Leader is used to raise disputes have strikes and then go before the employer or before a Tribunal and make some bargain. Here is a situation where the teachers say that they are not going to conduct the examination. Is this the spirit with which the Hon. Member wants to negotiate. Government will not be cowed down by such kind of threats.